# ನನ್ನ ನೀನು ಗೆಲ್ಲಲಾರೆ..!

ಶಾಲೆಯಲ್ಲಿ ಹಾಡಿದ ಚಿತ್ರಗೀತೆಯಲ್ಲಿ ನನಗೆ ಸಿಕ್ಕಿದ್ದು ಪ್ರಥಮ ಬಹುಮಾನ. ಅಚ್ಚರಿ, ಸಂತೋಷ, ಸಂಭ್ರಮ, ಸಡಗರದಿಂದ ಬಹುಮಾನ ಸ್ವೀಕರಿಸಿದ್ದೇ ಬಂತು. ಮನೆಗೆ ಬಂದಾಗ ಆ ಸಂಭ್ರಮ, ಉತ್ಸಾಹ ಎಲ್ಲ ಠುಸ್..

■ ಸುರೇಖಾ ಭೀಮಗುಳಿ





ಸವಿ ಸವಿ ನೆನಪು.. ಸಾವಿರ ನೆನಪು.. ಹಾಡು ನೆನಪಿದೆ ತಾನೆ? ಎಲ್ಲರ ಜೀವನದಲ್ಲೂ ನೂರಾರು ಸವಿ ನೆನಪುಗಳಿರುತ್ತವೆ. ವಯಸ್ಸು ಹೆಚ್ಚಾದಂತೆ ನೆನಪುಗಳ ಸರಮಾಲೆ ಒಂದೊಂದಾಗಿ ಸೇರಿಕೊಳ್ಳುತ್ತಾ ಸವಿ ನೆನಪುಗಳ ಬುತ್ತಿ ದೊಡ್ಡದಾಗುತ್ತಾ ಹೋಗುತ್ತದೆ. ದೊಡ್ಡವರಾದಂತೆ ಹಳೆಯ ನೆನಪುಗಳ ಬುತ್ತಿಯಿಂದ ಒಂದೊಂದೇ ನೆನಪುಗಳನ್ನು ಹೆಕ್ಕಿ ತೆಗೆದು ಅದನ್ನು ನೆನಪಿಸಿಕೊಳ್ಳುತ್ತಾ, ಮೆಲುಕು ಹಾಕುತ್ತಾ ಇರುವುದರಲ್ಲೂ ಏನೋ ಒಂದು ಖುಷಿ, ಪುಳಕ, ರೋಮಾಂಚನ..!

ಅದು ನನ್ನ ಶಾಲಾ ದಿನಗಳ ಸಮಯ. ನಾನಾಗ ಐದನೇ ತರಗತಿಯಲ್ಲಿದ್ದೆ. ಶಾಲೆಯಲ್ಲಿ ಭಾವಗೀತೆ, ಭಕ್ತಿಗೀತೆ, ಚಿತ್ರಗೀತೆಗಳ ವರ್ಷಾವಧಿ ಸ್ಪರ್ಧೆ ಏರ್ಪಾಡಾಗಿತ್ತು. ಆಗಿನ ಕಾಲದಲ್ಲಿ ಚಿತ್ರ ಗೀತೆಯ ಪುಸ್ತಕಗಳು ಯಾರೋ ಒಬ್ಬೊಬ್ಬರಲ್ಲಿ ಲಭ್ಯವಿದ್ದವು. ಅವರಿಂದ ಕೇಳಿ ಪಡೆದು ನೋಡಿದರೆ ಅದರಲ್ಲಿ ನಾನು ಕಳೆದ ವರ್ಷ ನೋಡಿದ 'ನೀ ನನ್ನ ಗೆಲ್ಲಲಾರೆ' ಸಿನಿಮಾದ ಹಾಡುಗಳು. ಆ ಪುಸ್ತಕ ನೋಡಿ ಒಂದು ಹಾಡನ್ನು ಬರೆದಿಟ್ಟುಕೊಂಡೆ.

ಮಧ್ಯಾಹ್ನದ ನಂತರ ಏಳನೆಯ ತರಗತಿಯ ದೊಡ್ಡ ಕೋಣೆಯಲ್ಲಿ ಸ್ಪರ್ಧೆ ಶುರುವಾಗಿಯೇ ಬಿಟ್ಟಿತು. ಬೇರೆಯವರು ಅದೇನು ಹಾಡು ಹೇಳಿದರೋ ನೆನಪಿಲ್ಲ. ನಾನು ಮಾತ್ರ 'ನನ್ನ ನೀನು ಗೆಲ್ಲಲಾರೆ ತಿಳಿದೂ ತಿಳಿದೂ ಛಲವೇತಕೇ...? ಎಲ್ಲರೆದುರು ಮಾನ ಹೋಗಿ ಕೊನೆಗೇ ಕೊನೆಗೇ ಮನೆಗೆ ಓಡುವೆ.. ನನ್ನಂಥ ಗಂಡಿಂದ ಸೋಲೋಕೆ ಆಸೆಯೆ ನಿನಗೇ..' ಹಾಡಿಯೇ ಬಿಟ್ಟೆ ! ಯಾರ ಪುಣ್ಯದ ಫಲವೋ ... ಸಿನಿಮಾದಲ್ಲಿ ಇದ್ದಂತೆ ನೃತ್ಯ ಮಾಡಲಿಲ್ಲವಲ್ಲ ಸದ್ಯ! ಪೂರಾ ನಂಬುವ ಹಾಗಿಲ್ಲ.. ಸ್ವಲ್ಪವಾದರೂ ಕೈಬಾಯಿ ತಿರುಗಿಸಿರುತ್ತೇನೆ ಬಿಡಿ... ಹಾಗೆಲ್ಲ ಕಂಬದಂತೆ ನಿಂತು ಹಾಡು ಹೇಳುವ ಜಾತಿಯೇನು ಅಲ್ಲ....

ಆ ಚಿತ್ರಗೀತೆ ಹಾಡುತ್ತೇನೆಂದು ನನಗೇ ಗೊತ್ತಿರಲಿಲ್ಲ ! ... ಇನ್ನು ಅಕ್ಕನಿಗೆ ಮತ್ತು ಟೀಚರಿಗೆ ಹೇಗೆ ಗೊತ್ತಿರಬೇಕು ? ಬಹುಶಃ ಗೊತ್ತಿದ್ದಿದ್ದರೆ ಅವರು ಆ ಹಾಡನ್ನು ಹಾಡಲು ನನಗೆ ಅನುಮತಿ ಕೊಡುತ್ತಿರಲಿಲ್ಲವೇನೋ ...ನಾನು ನೋಡಿದ ಸಿನಿಮಾದ ಹಾಡು ಸಿಕ್ಕಿತ್ತು .. ಹಾಡಿದ್ದೆ ಅಷ್ಟೆ. ಅಕ್ಕ ಮತ್ತು ಟೀಚರ್ ಇಬ್ಬರೂ ತಬ್ಬಿಬ್ಬು...! ನನ್ನ ಭೋಜರಾಜ್ ಮಾಸ್ಟ್ರಿಗೆ ಮಾತ್ರ ಬಹಳ ಸಂತೋಷ ವಾಗಿತ್ತು. ಎಷ್ಟೆಂದರೂ ಪಟ್ಟ ಶಿಷ್ಯಳಲ್ಲವೇ? ಅವರು ನನಗೆ 10/10 ಅಂಕ ಕೊಟ್ಟುಬಿಟ್ಟರು ...! ಅಕ್ಕ ಟೀಚರ್ ಭೋಜರಾಜ್ ಸರ್ ಸ್ಪರ್ಧಾಳುಗಳಿಗೆ ಕೊಟ್ಟ ಅಂಕಗಳನ್ನು ಸೇರಿಸಿದಾಗ ನನಗೆ ಮೊದಲ ಸ್ಥಾನ ದಕ್ಕಿಬಿಡುವುದೇ? ಅನಿರೀಕ್ಷಿತ ಫಲಿತಾಂಶ! ನಾನೇನು ಗೆಲ್ಲುವೆನೆಂದು ಭಾವಿಸಿರಲಿಲ್ಲ... ಅಲ್ಲಿಗೇ ಕಥೆ ಮುಗಿದಿದ್ದರೆ ಚೆನ್ನಾಗಿತ್ತು...

ಆದರೆ...

ಮನೆಗೆ ಬಂದ ಕೂಡಲೆ ಅಕ್ಕ ಮತ್ತು ಟೀಚರ್ ಇಬ್ಬರೂ ನನ್ನನ್ನು ತರಾಟೆಗೆ ತೆಗೆದುಕೊಂಡರು... 'ಹೋಗಿ ಹೋಗಿ ಅಂಥ ಹಾಡು ಹಾಡುವುದಾ? ಆ ಹಾಡಿನ ಅರ್ಥ, ಸಂದರ್ಭ ಗೊತ್ತುಂಟಾ ? ಅದು ಶಾಲೆಯಲ್ಲಿ ಸಹಪಾಠಿಗಳೆದುರಲ್ಲಿ ಹಾಡುವ ಹಾಡಾ ? ಯಾವುದಾದರೂ ಡೀಸೆಂಟ್ ಹಾಡು ಹೇಳಿದರೆ ಆಗುತ್ತಿರಲಿಲ್ಲವಾ ? ಸ್ಪರ್ಧಿಸುತ್ತೇನೆಂದು ಮೊದಲೇ ಹೇಳಬೇಕಿತ್ತಲ್ಲವಾ ? ಟೀಚರ್ ತಂಗಿಯಾಗಿ ಆ ಹಾಡು ಹೇಳಿ ನಮ್ಮ ಮಾನ ಕಳೆದೆ'.

'ಯಪ್ಪಾ... ಯಪ್ಪಾ.... ಮೊದಲ ಸ್ಥಾನ ಗೆದ್ದ ಖುಷಿಯೆಲ್ಲಾ ... ಗೋವಿಂದ ಅನ್ನಿ ಗೋವಿಂದ.... ಗೋವಿಂದ ... !

■

**ನೀವೂ ಬರೆಯಿರಿ**

ಸವಿ ಸವಿ ನೆನಪು.. ಇದೊಂದು ಹೊಸ ಅಂಕಣ.
ಬದುಕಿನಲ್ಲಿ ಸಾವಿರ ಸವಿನೆನಪುಗಳಿವೆ. ಅಂತಹ ನೆನಪುಗಳಲ್ಲಿ ಒಂದನ್ನು ಹೆಕ್ಕಿ ತೆಗೆದು ಅಕ್ಷರ ರೂಪಕ್ಕಿಳಿಸಿ. ಅದನ್ನು ಚಿತ್ರ ಸಮೇತ ನಮಗೆ ಕಳುಹಿಸಿ. ಬರಹ ಸುಮಾರು 400 ಶಬ್ದಗಳಿರಲಿ. ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಿರಿ.